**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ತಿ.ನರಸೀಪುರ.**

**ಸಿ.ಸಿ ಸಂಖ್ಯೆ:221/2020** ಪಿಡಬ್ಲೂ: **01**

ದಿನಾಂಕ: **14.09.2022** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**ಮುಖ್ಯ ವಿಚಾರಣೆ:** ಪಿರ್ಯಾದುದಾರರ ಪರ ಶ್ರೀ **ಎಚ್.ಆರ್.ಎಸ್** ವಕೀಲರಿಂದ:

ನಾನು ಈ ಪ್ರಕರಣದಲ್ಲಿ ಪಿರ್ಯಾದುದಾರನಾಗಿದ್ದು, ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸರಿ ಇರುತ್ತದೆ ಹಾಗೂ ಅದನ್ನು ನಾನೇ ಹೇಳಿ ಬರೆಸಿರುತ್ತೇನೆ. ಅದಕ್ಕೆ ನಾನು ಸಹಿ ಮಾಡಿರುತ್ತೇನೆ.

ದಿ: **06.08.2020** ರ ಚೆಕ್ಕಿನ ಸಂಖ್ಯೆ: **238313** ಹಾಜರು ಪಡಿಸಿದ್ದು, ಅದನ್ನು **ನಿಪಿ-1** ಎಂದು ಗುರುತಿಸಲಾಯಿತು. **ನಿಪಿ-1** ರಲ್ಲಿರುವ ಆರೋಪಿತನ ಸಹಿಯನ್ನು **ನಿಪಿ-1 ಎ** ಎಂದು ಗುರುತಿಸಲಾಯಿತು. ಬ್ಯಾಂಕಿನವರು ದಿ: **04.09.2020** ರಂದು ಹಣ ಸಾಲದು ಎಂದು ನೀಡಿದ ಹಿಂಬರಹವನ್ನು ಹಾಜರು ಮಾಡಿದ್ದು ಅದನ್ನು **ನಿಪಿ-2** ಎಂದು ಗುರುತಿಸಲಾಯಿತು.

ವಕೀಲರ ಮುಖಾಂತರ ಆರೋಪಿಗೆ ದಿ: **09.09.2020** ರ ಆರ್.ಪಿ.ಎ.ಡಿ ಮುಖಾಂತರ ಕಳುಹಿಸಿಕೊಟ್ಟ ಕಾನೂನು ನೋಟಿಸಿನ ಕಛೇರಿ ಪ್ರತಿ ಹಾಜರು ಮಾಡಿದ್ದು, ಅದನ್ನು **ನಿಪಿ-3** ಎಂದು ಗುರುತಿಸಲಾಯಿತು. ಅಂಚೆಯ ರಸೀದಿಯನ್ನು ಹಾಜರು ಪಡಿಸಿದ್ದು ಅದನ್ನು **ನಿಪಿ-4** ಎಂದು ಗುರುತಿಸಲಾಯಿತು. ಅಂಚೆ ಸ್ವೀಕೃತಿ ರಸೀದಿಯನ್ನು ನಿಪಿ-5 ಎಂದು ಗುರುತಿಸಲಾಯಿತು. ಆರೋಪಿತನ ವಿರುದ್ಧ ಕ್ರಮ ತೆಗೆದುಕೊಳ್ಳಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

**ಪಾಟಿ ಸವಾಲು:** ಆರೋಪಿ ಪರ ವಕೀಲರು ಪಾಟಿಸವಾಲಿಗೆ ಸಮಯಕೋರಿದ್ದು ಪಾಟೀ ಸವಾಲಿಗೆ ಸಮಯ ನೀಡಲಾಯಿತು.

ನನ್ನ ಹೇಳಿಕೆಯ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.

ಓ ಹೇ ಕೆ ಸರಿ ಇದೆ.

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ**
**ನ್ಯಾಯಾಲಯ ತಿ.ನರಸೀಪುರ.**